ಬೈದಿದ್ದರು. "ಒಬ್ಬನೇ ಸಿಕ್ಕಿದ ದಿನ ನಮ್ಮ ಪವರ್ ತೋರಿಸ್ತೀನಿ... ನಮ್ಮಣ್ಣನ ಮಾನ ಬೀದಿಪಾಲು ಮಾಡಿದೆಯಾ... ಲಾಂಗ್‌ನ ಮೇಲೆ ಆಣೆ... ನೆಮ್ಮದಿಯಿಂದ ಬದುಕುವುದಿಲ್ಲ ನೀನು..." ಹೀಗೆಯೂ ಒಂದು ಕಾಮೆಂಟ್ ಇತ್ತು. ಕಂಪ್ಯೂಟರ್ ಬಂದ್ ಮಾಡಿ ಕುಳಿತರು ಸಂಪಾದಕರು.

ಶ್ರೀನಿವಾಸ ಒಳಗೆ ಬಂದ.

"ಸರ್, ಶಿವಣ್ಣನ ಮೊದಲನೇ ಹೆಂಡ್ತಿ ಫೋನ್ ಮಾಡಿದ್ರು."

"ಏನ್ ಹೇಳಿದ್ರು?"

"ಶಿವಣ್ಣ ನನಗೆ ಮೋಸ ಮಾಡಿದ್ದಾರೆ. ಅವರ ರಾಸಲೀಲೆಯ ಕತೆಗಳ ಇಡೀ ಕಂತೆಯನ್ನೇ ಕೊಡ್ತೇನೆ... ದಿನಾ ಧಾರಾವಾಹಿಯಾಗಿ ಪ್ರಕಟಿಸಿ ಆವಯ್ಯ ಜನರೆದುರು ತಲೆ ಎತ್ತದಂತೆ ಮಾಡಿ... ಯಾವುದಕ್ಕೂ ಹೆದರಬೇಡಿ, ನಾನಿದ್ದೇನೆ, ನನ್ನ ತಮ್ಮ ಕೂಡ ರಾಜಕೀಯದಲ್ಲಿದ್ದಾನೆ ಅಂದ್ರು. ಸಂಪಾದಕರಿಗೆ ಕೇಳಿ ಹೇಳ್ತೀನಿ ಅಂದಿದ್ದೇನೆ. ಪುನಃ ಫೋನ್ ಮಾಡಿದ್ರೆ ಏನು ಹೇಳೋದು?" ಎಂದು ಕೇಳಿ ನನ್ನ ಉತ್ತರಕ್ಕಾಗಿ ಕೈಕಟ್ಟಿ ನಿಂತುಕೊಂಡ.

"ಏಯ್... ಅದೆಲ್ಲ ನಮಗೆ ಬೇಕಿಲ್ಲ ಕಣೋ.. ನಮ್ಮದು ನ್ಯೂಸ್ ಪೇಪರ್... ಯಾವಾಗಲೋ, ಯಾರಿಗೋ, ಯಾರೊಂದಿಗೋ ಇದ್ದ ಹಳೇ ಸಂಬಂಧಗಳೆಲ್ಲ ನ್ಯೂಸ್ ಆಗಲ್ಲ... ಚಾರಿತ್ರ್ಯ ಹನನಕ್ಕೆಲ್ಲ ನಾವಿಲ್ಲ. ನಯವಾಗಿ ಆಗಲ್ಲ ಅನ್ನು" ಅಂದರು ಸಂಪಾದಕರು.

"ಸರ್, ಒಬ್ರು ಮಹಿಳೆ ಲೈನಲ್ಲಿದ್ದಾರೆ... ಸಂಪಾದಕರಿಗೆ ಕೊಡಿ ಅನ್ನುತ್ತಿದ್ದಾರೆ..." ಅಂದಳು ಆಪರೇಟರ್.

"ಅವರೇ... ಮೊದಲ ಹೆಂಡ್ತಿಯೇ... ಇರಬೇಕು" ಅಂದ ಶ್ರೀನಿವಾಸ.

"ಅದೆಲ್ಲ ಆಗಲ್ಲ ಅಂತ ನಾನೇ ಹೇಳಿಬಿಡ್ತೀನಿ" ಅನ್ನುತ್ತ ರಿಸೀವರ್ ತೆಗೆದುಕೊಂಡು, "ಹಲೋ" ಅಂದರು ಸಂಪಾದಕರು.

"ಸಂಪಾದಕರಾ? ನಮಸ್ಕಾರ ಸರ್" ಅಂದರು ಆ ಮಹಿಳೆ.

"ನಮಸ್ಕಾರ... ಹೇಳಿ" ಅಂದರು ಸಂಪಾದಕರು.

"ನಿಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವ ನ್ಯೂಸ್ ಸರಿ ಇದೆಯಾ ಅಂತ ಚೆಕ್ ಮಾಡ್ತೀರಾ ನೀವು?" ಕೇಳಿದರಾಕೆ. ಇಂತಹ ಪ್ರಶ್ನೆಗಳ ನಿರೀಕ್ಷೆ ಮಾಡಿದ್ದರೂ ಕ್ಷಣ ಅಪ್ರತಿಭರಾದ ಸಂಪಾದಕರು ಕೂಡಲೇ ಸಾವರಿಸಿಕೊಂಡು "ನೀವು ಯಾರು ಮಾತಾಡ್ತಿರೋದು?" ಸ್ವಲ್ಪ ಗಡುಸಾಗಿಯೇ ಕೇಳಿದರು.

"ನಾನು ಯಾರೇ ಇರಲಿ, ಇವತ್ತಿನ ಬರ್ತ್‌ಡೇ ಚಟ್ನಿ ನ್ಯೂಸ್ ಸರಿಯಾ ಅಂತ ಪರಿಶೀಲಿಸಿದ್ದೀರಾ?" ಅಂದರಾಕೆ.

"ಇವತ್ತಿನ ನ್ಯೂಸ್ ಮಾತ್ರ ಅಲ್ಲ... ಎಲ್ಲಾ ದಿನಗಳ ಎಲ್ಲಾ ನ್ಯೂಸನ್ನೂ ಚೆಕ್ ಮಾಡೇ ಮಾಡ್ತೀವಿ.. ನೀವು ಯಾರು ಹೇಳಿ, ನಿಮ್ಮ ಕಂಪ್ಲೇಂಟ್ ಏನು ಹೇಳಿ. ಏನು ತಪ್ಪಾಗಿದೆ ಹೇಳಿ... ತನಿಖೆ ಮಾಡ್ತೇನೆ. ನೀವು ಹೇಳೋದು ನಿಜವಾದರೆ ತಪ್ಪೊಪ್ಪಿಕೊಂಡು ನಾಳೆ ಅದೇ ಜಾಗದಲ್ಲಿ ಕ್ಷಮೆಯಾಚನೆ ಸಹಿತ ತಿದ್ದುಪಡಿ ಹಾಕ್ತೇವೆ..." ಸಂಪಾದಕರು ಮಾತಿನಲ್ಲೇ ಘನತೆ ಪ್ರದರ್ಶಿಸಿದರು.

"ಶಿವಣ್ಣರವರ ಮೊದಲ ಹೆಂಡ್ತಿ ಮತ್ತು ಎರಡನೇ ಹೆಂಡ್ತಿ ನಡುವೆ ಕಿತ್ತಾಟ ಅಂತ ಬರೆದಿದ್ದೀರಲ್ಲ... ಸರಿಯಾ ಅದು?" ಆಕೆ ದನಿಯೇರಿಸಿ ಕೇಳಿದರು.

"ಸರಿಯಾದ ನ್ಯೂಸೇ ಅದು. ಘಟನೆಯನ್ನು ನೋಡಿದವರಿದ್ದಾರೆ, ಫೋಟೊಗಳಿವೆ. ಪೇಪರಲ್ಲಿ ಹಾಕಿದಷ್ಟೇ ಫೋಟೊ ಅಲ್ಲ, ಬೇರೇನೂ ಇವೆ. ಎಲ್ಲ ಚೆಕ್ ಮಾಡಿದ್ದೇವೆ" ಸಂಪಾದಕರು ಜೋರಾಗಿಯೇ ಉತ್ತರಕೊಟ್ಟರು.

"ಅದೆಲ್ಲ ಸರಿ ಸಾರ್... ಆದರೆ ನೀವು ಬರೆದ ಹಾಗೆ ಲಕ್ಷ್ಮಿ ಶಿವಣ್ಣನ ಮೊದಲ ಹೆಂಡ್ತಿ ಅಲ್ಲ.